ವಿ. ಹೇಮಂತಕುಮಾರ್, ಬೆಂಗಳೂರು
ಕನಸಿನಲ್ಲಿ ಚಪ್ಪಲಿ ಕಳುವಾದರೆ ಏನರ್ಥ?



'ಇಂದು ದೇವಸ್ಥಾನಕ್ಕೆ ಬರಿಗಾಲಲ್ಲಿ ಹೋಗಿ' ಎಂದು.

ರವಿಕಾಂತ ಎಂ.ಕೆ. ತುಮಕೂರು
ಕೆಲವು ಕಚೇರಿಗಳಲ್ಲಿ ನಿರೀಕ್ಷಣಾ ಅಧಿಕಾರಿ ಎಂದು ಇರುವರು. ಅವರು ಏನನ್ನು ನಿರೀಕ್ಷಿಸುವರು?
ಶುದ್ಧ ಬಕರಾಗಳನ್ನು.

ಎಸ್ಸೆನ್ಕೆ, ಕಡೂರು
ಹಣವಂತ ಗಂಡು, ಸುಂದರ ಹೆಣ್ಣು ಎಲ್ಲಿ ಹೋದರೂ ಗೌರವಕ್ಕೆ ಪಾತ್ರರಾಗುವರೆಂಬುದು ನಿಜವೆ?
ಹ್ಞ! ತಿರುಮಲ ದೇಗುಲದಲ್ಲಿ ಎಲ್ಲರಿಗೂ ಎರಡು ನಿಮಿಷದ ನಂತರ 'ರಾಂಡಿ ಪದಂಡಿ'ಯೇ.

ಮಹಾವೀರ ಕಾಸರ, ಶಿವಮೊಗ್ಗ
ಉಡುಗೆ ತುಂಡು–ತುಂಡಾಗಿದ್ದಷ್ಟೂ ಬೆಲೆ ಹೆಚ್ಚು. ಏಕೆ?
ತುಂಡುಗಳು ಉದುರಿಹೋಗದಂತೆ ಹೊಲಿಯಲು ಹೆಚ್ಚು ಸಮಯ ಬೇಕಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಅಂಗೈಯಲ್ಲಿ ಕೂದಲು ಇಲ್ಲವಲ್ಲ, ಏಕೆ?
ತಿನ್ನುವ ಅನ್ನದಲ್ಲಿ ಕೂದಲು ಸೇರದಿರಲೆಂಬ ಸೃಷ್ಟಿಯ ಕಾಳಜಿ.

ಎಂ.ಸಿ. ಧನ್ಯತಾ, ಬೆಂಗಳೂರು
ನಿಜವಾದ ಶಿಕ್ಷಕ ಹೇಗಿರಬೇಕು?
ಕಷ್ಟದ ವಿಷಯವೂ ಇಷ್ಟವಾಗುವಂತೆ ಹೇಳುವಂತಿರಬೇಕು.

ಕೆ.ಎಂ. ವಿಭೂತಿ, ಹರಿಹರ
ಸತ್ಯ ಸತ್ತಮೇಲೆ ಸತ್ಯ ಸಂಶೋಧನೆ ಮಾಡಲು ಸಾಧ್ಯವೆ?
ಪೋಸ್ಟ್ ಮಾರ್ಟಮ್‌ನಲ್ಲೇ ಎಷ್ಟೋ ಸತ್ಯಗಳು ಬೆಳಕಿಗೆ ಬರುವುದು.

ಬಿ. ಚಂದ್ರೇಗೌಡ, ಬೆಂಗಳೂರು
ಕನ್ನಡತನ ಎಂದರೇನು?
ತನ್ನನ್ನು ಹಿಂಡಿ ಹಿಪ್ಪೆ ಮಾಡಿದವರಿಗೂ ಸಿಹಿ ಉಣಿಸುವ 'ಕಬ್ಬುತನ'.

ಅಮರಯ್ಯಾ ಪತ್ರಿಮಠ, ಸುರಪುರ
ಹೃದಯದಿಂದ ಬಂದ ಮಾತಿಗೂ, ನಾಲಿಗೆಯಿಂದ ಬಂದ ಮಾತಿಗೂ ವ್ಯತ್ಯಾಸ?
ಹೃದಯದ ಮಾತನ್ನು ಕೇಳಲು ಸ್ಟೆತಾಸ್ಕೋಪ್ ಬೇಕು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಆಂಬುಲೆನ್ಸ್ ಸೈರನ್‌ಗೂ, ಹೆಣ್ಣಿನ ಅಳುವಿಗೂ ಏನು ವ್ಯತ್ಯಾಸ?
ಅದು 'ಓಡಿಸ್ಸೆ, ರನ್' ಎನ್ನುತ್ತದೆ; ಇದು 'ಇನ್ನು ಸೈರಿಸೆನ್' ಎನ್ನುತ್ತದೆ.

ನರಸಿಂಹ ಪೈ, ಕಾಸರಕೋಡ
ದೇಶದ ಭವಿಷ್ಯವನ್ನು ಬದಲಾಯಿಸುವ ಶಕ್ತಿ ಯಾವುದಕ್ಕಿದೆ?
ಏನನ್ನೂ ಬೇಡದ ಮಾಧ್ಯಮಾಂಗಕ್ಕೆ, ಜನಾಂಗಕ್ಕೆ.

ಕವಿತಾ ವೆಂಕಟೇಶ್
ಗ್ರಹಣವನ್ನು ವೈಜ್ಞಾನಿಕವಾಗಿ ನಂಬಬಹುದು. ಗ್ರಹಚಾರವನ್ನು ನಂಬುವುದು ಹೇಗೆ?
ಸಕಲ ಮೌಢ್ಯಗಳನ್ನೂ ನಂಬಿಸುವ ಜ್ಯೋತಿಷಿಯನ್ನು ನಂಬುವ ಮೂಲಕ.

ಬಿ. ಬಸವರಾಜ್, ಹರಿಹರ
ಅಕ್ಕಮಹಾದೇವಿಯ ಕೇಶರಾಶಿಯ ಗುಟ್ಟೇನು?
ಚೆನ್ನಮಲ್ಲಿಕಾರ್ಜುನ ಬ್ರ್ಯಾಂಡ್ ಭಕ್ತಿ ಶಾಂಪೂ.

ಬೂಕನಕೆರೆ ವಿಜೇಂದ್ರ, ಮೈಸೂರು
ರಾಜಕಾರಣಿಗಳೇಕೆ ಸಾರ್ವಜನಿಕ ಸಭೆಗಳಿಗೆ ತಡವಾಗಿ ಬರುವುದು?
ಹೆಚ್ಚು ಕಾಲ ಕಳೆದರೆ ಹೆಚ್ಚು ಬೇಡಿಕೆಗಳು ಬಂದಾವೆಂದು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳು; ಶಿಕ್ಷಕರು?
ಗದ್ದೆಗೆ ಫಲವತ್ತತೆ ನೀಡುವ ರಸಗೊಬ್ಬರಗಳು.

ಆನಂದಿ ಕಾರಂತ್, ಕಳ್ಳಿಗೆ ಗ್ರಾಮ
ಮನುಷ್ಯರ ಮೂಢನಂಬಿಕೆಗೆ ಅಂತ್ಯ ಎಂದು?
ಪ್ರತಿಯೊಂದನ್ನೂ ಪ್ರಶ್ನಿಸಿಯೇ ಒಪ್ಪಲು ಆರಂಭಿಸಿದಂದು.

ಬಿ.ಆರ್. ಉಷಾ, ಬೆಂಗಳೂರು
ಜನರು ಯಮದೇವರ ಪೂಜೆ ಮಾಡಲ್ಲ. ಯಾಕೆ?
ಕರೆಯದೆಯೂ ಬಂದೇ ಬರುವವನಿಗೆ ಪೂಜೆ ದಂಡ ಎಂದು.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ, ಸುರಧೇನುಪುರ
ಕೋಮು ಬಣ್ಣ ಮಾರುವ ಹಾರ್ಡ್‌ವೇರ್ ಎಲ್ಲಿದೆ?
ರಾಜಕೀಯ ನಿರತ ಪಂಗಡವಾರು ಮಠಗಳಲ್ಲಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ನೆಚ್ಚಿನ 'ಸುಧಾ' ವಾರಪತ್ರಿಕೆಯು ಗುರುವಾರದಂದೇ ಹೊರಬರಲು ಕಾರಣ?
'ಏನ್ ಗುರೂ ಇನ್ನಾ ಬಂದಿಲ್ಲ' ಎನ್ನುವ ಓದುಗರ ತೃಷೆ ತಣಿಸಲು.

ಗುರುರಾಜ ಆಚಾರು, ಬಳ್ಳಾರಿ
ಕಷ್ಟ ಬಂದಾಗ ನೆರಳು ಕೂಡ ನಮ್ಮನ್ನು ಬಿಡುತ್ತೆ. ನಿಜಾನಾ?
ಕಷ್ಟ ಬಂದಾಗ ನಾವು ಟ್ಯೂಬ್‌ಲೈಟ್ ಆಗುತ್ತೀವಲ್ಲ; ಟ್ಯೂಬ್‌ಲೈಟ್ ಕೆಳಗೆ ನೆರಳು ದಟ್ಟೈಸದು.

ಆರ್. ಮಧುಸೂದನ್, ಹಾಸನ
ಮನುಷ್ಯನಿಗೆ ನಿಸ್ವಾರ್ಥ ನಿಷ್ಠೆ ತೋರುವ ನಾಯಿಯು ಪಕ್ಕದ ಏರಿಯಾ ನಾಯಿ ಕಂಡಾಗ ಬೊಗಳುವುದೇಕೆ?



ತನ್ನ ಯಜಮಾನನನ್ನು ಬುಟ್ಟಿಗೆ ಹಾಕಿಕೊಂಡುಬಿಟ್ಟೀತೆಂಬ 'ಜಾಬ್ ಇನ್‌ಸೆಕ್ಯುರಿಟಿ'.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ವಾನಪ್ರಸ್ಥಾಶ್ರಮ ಕೈಗೊಳ್ಳುವಿಕೆ ಕೊನೆಗೊಂಡದ್ದು ಯಾವ ಇಸವಿಯಲ್ಲಿ?
ವಾನಪ್ರಸ್ಥದ ವಯಸ್ಸಿನವರು ವಾನರರಂತೆ ವಿಷಯಾಸಕ್ತರಾದ ಇಸವಿಯಲ್ಲಿ.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಈ ಜಗತ್ತಿನಲ್ಲಿರುವ ನಿಜವಾದ ಅಮೃತ ಯಾವುದು?
ಆತ್ಮೀಯರ ಬಾಯಲ್ಲಿ ಹೊರಡುವ ನಮ್ಮದೇ ನಾಮಾಮೃತ.

■ ರಾಮ್